(ಇಂದು ದಿನಾಂಕಃ 05–11–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ವಿ ಪಿ ಪಿ ವಕೀಲರಿಂದ ಃ -

1) ನಾನು ಅಣ್ಣಿಗೇರಿಯ ನಿವಾಸಿ. ಪ್ರಕರಣದ ವಾದಿಯು ಯಲ್ಲಮ್ಮ ಅವರ ಸಂಪೂರ್ಣ ಮಾಹಿತಿ ಗೊತ್ತಿಲ್ಲ. ಅವರ ಅಕ್ಕನ ಮಕ್ಕಳು ಇರುತ್ತಾರೆ. ಪ್ರತಿವಾದಿಯರು ಅಮೃತಪ್ಪ ಹಾಗೂ ಬಾಳವ್ವನ ಮಕ್ಕಳು. ಸದರಿ ವಿಷಯವನು ನಾನು ಕಲ್ಪನೆ ಮಾಡಿಕೊಂಡು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

2) ದಾವಾ ಆಸ್ತಿಯು ಸರ್ವೆ ಸಂಖ್ಯೆ 349 ಹೊಲ ಇರುತ್ತದೆ. ಅದರ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಹೊನ್ನೆಕ್ಕಿರವರ ಹೊಲ, ಉತ್ತರಕ್ಕೆ ಪ್ರಹ್ಲಾದ ಚಲುವಾದಿ ಹೊಲ ಹಾಗೂ ದಕ್ಷಿಣಕ್ಕೆ ಕೆವಿಎಆರ ಲ್ಯಾಂಡ ಇರುತ್ತದೆ. ಸದರಿ ಚಕಬಂದಿಯನ್ನು ನಾನು ಕಲ್ಪನೆ ಮಾಡಿಕೊಂಡು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

3) ಯಲ್ಲಮ್ಮ ರವರು ರೋಣದ ನಿವಾಸಿ. ಸದರಿಯವರ ಮನೆತನದ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಯಲ್ಲವ್ವ ರವರ ತಂದೆಯ ಹೆಸರು ಹನುಮಂತಪ್ಪ, ತಾಯಿ ಅಡಿವೆವ್ವ ಅವರಿಗೆ 4 ಜನ ಮಕ್ಕಳು ಅವರು ಯಲ್ಲವ್ವ, ಬಾಳವ್ವ, ಅಮೃತಪ್ಪ ಹಾಗೂ ನಿಂಗಪ್ಪ. ಸದರಿಯವರಲ್ಲಿ ಬಾಳವ್ವ ಮರಣ ಹೊಂದಿರುತ್ತಾಳೆ. ಹನುಮಂತಪ್ಪ ಹಾಗೂ ಅಡಿವೆವ್ವ ರವರು ಮರಣ ಹೊಂದಿರುತ್ತಾರೆ.

4) ದಾವಾ ಆಸ್ತಿಯು ಹನುಮಂತಪ್ಪ ರವರ ಹಿರಿಯರಿಂದ ಬಂದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಬರೆಯಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ಮತ್ತು ಪ್ರತಿವಾದಿಯರ ಮನೆ ಹೊಂದಿಕೊಂಡು ಇರುವುದಿಲ್ಲ ನಾನು ಹೊರಕೇರಿಯಲ್ಲಿ ವಾಸ ಮಾಡುತ್ತಾರೆ ಪ್ರತಿವಾದಿಯರು ಪೇಠೆಯಲ್ಲಿ ವಾಸ ಮಾಡುತ್ತಾರೆ. ನನಗೆ ಹಾಗೂ ಪ್ರತಿವಾದಿಯರಿಗೆ ಸಂಬಂದವಿರುವುದಿಲ್ಲ ಆದರೆ ಮನೆತನದ ಹಿರೆತನಕ್ಕೆ ನಾನು ಹೋಗುತ್ತೇನೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಯರ ಮನೆಯ ಬಳಿ ಸಾಕಷ್ಟು ಹಿರಿಯರು ಹಾಗೂ ಸಮಾಜದ ಹಿರಿಯರು ಇರುತ್ತಾರೆ ಎಂದರೆ ಸರಿ.

5) ಅಮೃತಪ್ಪನ ತಮ್ಮನಾದ ನಿಂಗಪ್ಪನು ಈ ಮೊದಲು ಚಹಾ ಅಂಗಡಿಯಲ್ಲಿ ಸಪ್ಲಯರ ಕೆಲಸ ಮಾಡುತ್ತಿದ್ದು ಈಗ ಗೊತ್ತಿಲ್ಲ. ಸದರಿಯವರು ಮಾನಸಿಕವಾಗಿ ಅಸ್ವಸ್ಥನಿರುತ್ತಾನೆ ಅಂದರೆ ಸರಿಯಲ್ಲ. ಎಲ್ಲರೂ ಬಳಿ ಸರಿಯಾಗಿ ಮಾತನಾಡುತ್ತಾನೆ. ಅಮೃತಪ್ಪ ಹಾಗೂ ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ. ನ್ಯಾಯಾಲಯದಲ್ಲಿ ನನಗೆ ಸಂಬಂದ ಪಟ್ಟ ಬಹಳಷ್ಟು ಪ್ರಕರಣಗಳು ಇವೆ ಎಂದರೆ ಸರಿ. ನನಗೆ ಕೋರ್ಟ ಕಚೇರಿಯಲ್ಲಿ ಒಡನಾಟವಿದ್ದು ಯಾರಿಗೂ ಸಹ ಮಾಹಿತಿ ಇಲ್ಲದೇ ಸಹಾಯ ಮಾಡಲು ಸಾಕ್ಷ್ಯ ನುಡಿಯುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು 1 ವರ್ಷ ಕಾಲ ಅಮೃತಪ್ಪ ರವರ ಹೊಲವನ್ನು ಲಾವಣಿ ಮಾಡಿರುತ್ತೇನೆ. ಸದರಿ ವಿಷಯವನ್ನು ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ.

6) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ 5 ಲಕ್ಷ ವ್ಯವಹಾರದ ಬಗ್ಗೆ ಸುಳ್ಳು ನುಡಿದಿರುತ್ತೇನೆ ಅಂದರೆ ಸರಿಯಲ್ಲ. ನಾನು 10 ನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ಸಾಮಾನ್ಯವಾಗಿ 100 ರೂಪಾಯಿಕ್ಕಿಂತ ಹೆಚ್ಚು ಬೆಲೆಬಾಳುವ ಸ್ಥಿರಾಸ್ತಿಯನ್ನು ಮಾರಾಟ ಮಾಡಲು ನೋಂದಣಿ ಮಾಡಬೇಕು ಎಂಬ ಸಾಮಾನ್ಯ ಜ್ಞಾನವಿರುತ್ತದೆ. ಪ್ರತಿವಾದಿಯರ ನಡುವೆ ಯಾವುದೇ ಲಿಖಿತ ಕರಾರು ಆಗಿರುವುದಿಲ್ಲ. ನನಗೆ ನೋಂದಣಿಯ ಬಗ್ಗೆ ಸಮಾನ್ಯ ಜ್ಞಾನವಿದ್ದು ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

7) ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿದ ಲಕ್ಷ್ಮೀ ಎನ್ನುವವರು ಪ್ರಕರಣದಲ್ಲಿ ಪಕ್ಷಗಾರರು ಇರುವುದಿಲ್ಲ. ಸದರಿಯವರು ಯಲ್ಲವ್ವನ ಸೊಸೆಯಾಗುತ್ತಾರೆ. ಸದರಿಯವರ ವಿವಾಹ ರೋಣದಲ್ಲಿ ಆಗಿದ್ದು ಅದರ ಹಿರೆತನಕ್ಕೆ ನಾನೇ ಹೋಗಿರುತ್ತೇನೆ. ದಿನಾಂಕ ನಿಖರವಾಗಿ ಹೇಳಲು ಬರುವುದಿಲ್ಲ. ವರದಕ್ಷಣೆ ಪಡೆದುಕೊಳ್ಳುವುದು ಅಪರಾಧ ಎಂದು ತಿಳಿದಿದೆ. ವಿವಾಹದ ಸಮಯದಲ್ಲಿ ಬೆಲೆಬಾಳುವ ವಸ್ತುಗಳನ್ನು ನೀಡಿದ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಅದರ ಬಗ್ಗೆ ಯಾವುದೇ ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ.

8) ಉಮೇಶನು ದುಷ್ಚಟಕ್ಕೆ ಇಡಾದ ಬಗ್ಗೆ ಯಾವುದೇ ದೂರು ಸಲ್ಲಿಸಿಲ್ಲ. ಉಮೇಶನು ದುಷ್ಚಟಕ್ಕೆ ಇಡಾಗಿ ಮದ್ಯದ ಅಮಲಿನಲ್ಲಿ ನನ್ನ ಮಗಳಿಗೆ ತೊಂದರೆ ನೀಡುತ್ತಿದ್ದ ಬಗ್ಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುತ್ತೇನೆ. ಉಮೇಶನಿಗೆ ಆತನ ಮಾವ, ಹೆಂಡತಿ ಹಾಗೂ ಮನೆಯವರು ಕಿರುಕುಳ ನೀಡಿದ ಕಾರಣ ಆತನು ಮರಣ ಹೊಂದಿರುತ್ತಾನೆ ಅಂದರೆ ಸರಿಯಲ್ಲ. ನನಗೆ, ನನ್ನ ಮಗಳಿಗೆ ಹಾಗೂ ಲಕ್ಷ್ಮೀಗೆ ಉಮೇಶನೂ

ಎಂದಿಗೂ ತೊಂದರೆ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ನನಗೆ ಲಕ್ಷ್ಮೀ ಎನ್ನುವ ಮಗಳು ಇಲ್ಲಾ ಎಂದರೆ ಸಾಕ್ಷಿಯು ಎಲ್ಲಾ ಹೆಣ್ಣುಮಕ್ಕಳು ನನಗೆ ಮಗಳು ಆಗಬೇಕು ಎಂದು ನುಡಿಯುತ್ತಾರೆ.

9) ಉಮೇಶನು ಲಕ್ಷ್ಮೀ ರವರು ನೀಡಿದ ತೊಂದರೆಗೆ ವಿವಾಹ ವಿಚ್ಛೇದನೆ ಮಾಡಿಕೊಂಡಿರುತ್ತಾನೆ ಅಂದರೆ ಸಾಕ್ಷಿಯು ವಿಚ್ಛೇದನೆಯು ಆತನ ಮದ್ಯದ ದುಷ್ಚಟಕ್ಕೆ ಆಗಿರುತ್ತದೆ. ಸದರಿ ವಿಷಯದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನನಗೆ ವಾದಿ ಪ್ರತಿವಾದಿಯರ ಮನೆತನದ ಬಗ್ಗೆ ಹಾಗೂ ವ್ಯವಹಾರಗಳ ಬಗ್ಗೆ ಮಾಹಿತಿ ಇಲ್ಲದೇ ಇದ್ದರು ಸಹ ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲಾ.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**